ದಿನಾಂಕ 17.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:-** ವಾದಿ ಪರ ಶ್ರೀ. ಬಿ.ಆರ್.ಎಸ್ ವಕೀಲ **ರಿಂದ**

ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ವಂಶವೃಕ್ಷ ಪ್ರಮಾಣ ಪತ್ರವನ್ನು ನಿಪಿ-1 ಎಂದು,

2. ಕೆ ಆರ್ ಪೇಟೆ ತಾಲ್ಲೂಕು, ಬೂಕಿನಕೆರೆ ಹೋಬಳಿ, ಮಾವಿನಕೆರೆ ಗ್ರಾಮದ ಸರ್ವೇ ನಂಬರ್ 77/3 ಬಿ-ಪಿ2 ರ 2016-17 ನೇ ಸಾಲಿನ ಪಹಣಿಯನ್ನು ನಿಪಿ-2 ಎಂದು,

3. ಕೆ ಆರ್ ಪೇಟೆ ತಾಲ್ಲೂಕು, ಬೂಕಿನಕೆರೆ ಹೋಬಳಿ, ಮಾವಿನಕೆರೆ ಗ್ರಾಮದ ಸರ್ವೇ ನಂಬರ್ 78/8 ಪೈಕಿ ಪಿ-1 ರ 2016-17 ನೇ ಸಾಲಿನ ಪಹಣಿಯನ್ನು ನಿಪಿ-3 ಎಂದು,

4. ಕೆ ಆರ್ ಪೇಟೆ ತಾಲ್ಲೂಕು, ಬೂಕಿನಕೆರೆ ಹೋಬಳಿ, ಮಾವಿನಕೆರೆ ಗ್ರಾಮದ ಸರ್ವೇ ನಂಬರ್ 18/4 ಎ ಪೈಕಿ ಪಿ-4 2016-17 ನೇ ಸಾಲಿನ ಪಹಣಿಯನ್ನು ನಿಪಿ-4 ಎಂದು,

5. ಅಸೆಸ್‌ಮೆಂಟ್ ನಂಬರ್ 148 ರ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ನ್ನು ನಿಪಿ-5 ಎಂದು,

6. ವಿವಾಹ ಆಹ್ವಾನ ಪತ್ರಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.